ಸಮೂಹವನ್ನು ಅರಸಿಕೊಂಡು ಹೋಗಿರುವರೋ ಎನಿಸಿತು. ಆ ಬೆಳಗು ಹೊತ್ತಿನ ಪ್ರಾಕೃತಿಕ ಸೌಂದರ್ಯವೋ, ಕಟ್ಟಡಗಳ ಭವ್ಯತೆಯೋ ಒಂದು ಇನ್ನೊಂದನ್ನು ಹಿಂದೆ ಹಾಕುವಂತಿತ್ತು.

ಆ ದಿನ ವಿಶ್ವವಿದ್ಯಾನಿಲಯ ನೋಡಲು ಹೋದವರು ನಾವು ನಾಲ್ವರು ಮಾತ್ರ ಆಗಿರಲಿಲ್ಲ. ಜಪಾನ್ ಮತ್ತು ಚೀನಾದಿಂದ ಬಂದ ವಿದ್ಯಾರ್ಥಿ ಸಮೂಹ ಬಸ್ಸಿನಿಂದಿಳಿದು ತಂಡೋಪತಂಡವಾಗಿ ಪ್ರತಿಯೊಂದು ವಿಭಾಗವನ್ನೂ ಪರಿಚಯಿಸಿಕೊಳ್ಳುತ್ತ ಹೋಗುತ್ತಿದ್ದರು. ಕರ್ನಾಟಕದಲ್ಲಿ ಜನ ಅವರವರ ದೈವದ ಜಾತ್ರೆಗೆ ಹೋದಂತೆ ಇಲ್ಲಿ ಶಿಕ್ಷಣಪ್ರಿಯರು ಈ ಜಗತ್ಪ್ರಸಿದ್ಧ ವಿಶ್ವವಿದ್ಯಾನಿಲಯವನ್ನು ನೋಡಲು ಬಂದಿದ್ದರು. ಅಲ್ಲಿ ನಾನು ಎದುರುಗೊಂಡ ಗ್ರಂಥ ಭಂಡಾರವಾದರೋ ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಂತಿತ್ತು. ಆದರೆ ಇನ್ನೂ ಭವ್ಯವಾಗಿದ್ದಿತು.

1640ರಲ್ಲಿ ಆ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಹಾರ್ವರ್ಡ್ ಮಹಾಶಯನ ವಿಗ್ರಹ ಗ್ರಂಥ ಭಂಡಾರದ ಇತ್ತಿತ್ತ ಉತ್ತರಕ್ಕೆ ಎತ್ತರವಾದ ವೇದಿಕೆಯ ಮೇಲಿತ್ತು. ಎಲ್ಲಕ್ಕಿಂತ ನನಗೆ ಸಂತೋಷ ತಂದ ಸಂಗತಿಯೆಂದರೆ ವಿಶ್ವವಿದ್ಯಾನಿಲಯದ ಹಿಂಭಾಗ ಹಾರ್ವರ್ಡ್ ಸರ್ಕಲ್ಲಿನ ಬಳಿ ಇದ್ದ ಪುಸ್ತಕದ ಅಂಗಡಿ. ಜಾತ್ರೆಯಲ್ಲಿ ಸಿಹಿ ಅಂಗಡಿಯ ಮುಂದೆ ನಿಂತಂತೆ ಅಲ್ಲಿಯೂ ಜನ. ಆ ಪುಸ್ತಕ ಭಂಡಾರದ ಒಳಗೆ ಪ್ರವೇಶಿಸಿ ಮಹಡಿ ಹತ್ತಿ ಬಲಕ್ಕೆ ತಿರುಗಿದರೆ ನಮ್ಮ ಕಣ್ಣಿಗೆ ಬಿದ್ದದ್ದು ಭಾರತೀಯ ಮಹಾಕಾವ್ಯಗಳ ಇಂಗ್ಲಿಷ್ ಭಾಷಾಂತರ ಕೃತಿಜೋಡಣೆಯ ಕಪಾಟು. ಆ ಪುಸ್ತಕ ಮಳಿಗೆಯಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯ ಪ್ರಕಟಿಸಿದ ಅನೇಕ ದೇಶ-ಭಾಷೆಗಳ ಪುಸ್ತಕಗಳ ಪ್ರದರ್ಶನ ಇರುವಂತೆ ಭಾರತೀಯ ಮುಖ್ಯಕೃತಿಗಳು ಮಾರಾಟ ಮತ್ತು ವೀಕ್ಷಣೆಗೆ ಇದ್ದವು. ಅದರ ನಡುವೆ ನಾವು ನೋಡಿದ್ದು ಕನ್ನಡಿಗರಾದ ನಮಗೆ ಮಹದಾನಂದ ತಂದದ್ದು, ಕನ್ನಡದಿಂದ ಇಂಗ್ಲಿಷ್‌ಗೆ ಭಾಷಾಂತರಿಸಿದ್ದ ರಾಘವಾಂಕನ ಹರಿಶ್ಚಂದ್ರ ಕಾವ್ಯ. ಎಲ್ಲಿಯ ಹಂಪೆಯ ಹರಿಹರ, ರಾಘವಾಂಕ, ಹರಿಶ್ಚಂದ್ರ, ಎಲ್ಲಿಯ ಹಾರ್ವರ್ಡ್ ವಿಶ್ವವಿದ್ಯಾನಿಲಯ? ಅಲ್ಲದೆ ಕಾಲದ ಅಂತರವೆಷ್ಟು? ನಾನು, ಶ್ರೀಧರ್, ಶಿವಪ್ರಕಾಶ್, ಮೀನಾ ಇದೇ ಜಾಗದಲ್ಲಿ ಇದೀಗ ನಾವು ಕೈಗೊಂಡಿರುವ ಕುಮಾರವ್ಯಾಸನ ಭಾರತ ಕಥಾಮಂಜರಿಯ ಭಾಗಗಳು ಭಾಷಾಂತರಗೊಂಡು ರಾಘವಾಂಕನ ಜೊತೆ ಸಂಸ್ಥಾಪನೆಗೊಳ್ಳಲಿ ಎಂದು ಬಯಸಿದೆವು. ಕನ್ನಡ ಕವಿ ಎಚ್.ಎಸ್. ಶಿವಪ್ರಕಾಶ್ ಅದೇ ವೇಳೆ ಚಿಲಿ ದೇಶಕ್ಕೆ ಬಂದಿದ್ದು, ನ್ಯೂಯಾರ್ಕ್‌ನ ಸ್ಟೋನಿಬ್ರೂಕ್ ವಿಶ್ವವಿದ್ಯಾನಿಲಯದ ಭಾಷಾಶಾಸ್ತ್ರ ಪ್ರಾಧ್ಯಾಪಕ ಎಸ್. ಎನ್. ಶ್ರೀಧರ್ ಅವರ ಆಹ್ವಾನದ ಮೇಲೆ ಒಂದು ವಾರ ಕಾಲ ಕುಮಾರವ್ಯಾಸನ ಕರ್ಣಪರ್ವ ಭಾಷಾಂತರದ ಕೆಲಸಕ್ಕೆ ಬಂದಿದ್ದರು.

* * *

ರೋಹನ್ ಮೂರ್ತಿಯವರು ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ಭಾರತೀಯ ಮಹಾಕಾವ್ಯಗಳ ಭಾಷಾಂತರ ಯೋಜನೆಯಡಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಿಕೆಯಾಗಿದ್ದ ವನಮಾಲಾ ವಿಶ್ವನಾಥ್ ಅವರು ಭಾಷಾಂತರಿಸಿದ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಪ್ರತಿಗಳು ಕಪಾಟಿನಲ್ಲಿದ್ದವು. ಇದು ಉತ್ಪ್ರೇಕ್ಷೆಯ ಸಂಗತಿಯೋ, ನಿಜದ ಮಾತೋ, ನನಗೆ ಅಲ್ಲಿ ಅನ್ನಿಸಿದ್ದೆಂದರೆ – ಈ ವಿಶ್ವವಿದ್ಯಾನಿಲಯ ಪ್ರಕಟಿಸಿರಬಹುದಾದ ಇನ್ಯಾವ ಗ್ರಂಥದಲ್ಲಿಯೂ ಅಥವಾ ಕಾವ್ಯದಲ್ಲಿಯೂ ಮಹಾಕವಿ ರಾಘವಾಂಕ ಪ್ರತಿಪಾದಿಸಿದ ಘನಸತ್ಯದ ಸಂಗತಿ ಇರಲಾರದೆನಿಸಿತು. ಜಗತ್ತಿನ ಎಲ್ಲ ಶ್ರೇಷ್ಠ ಕಾವ್ಯಗಳೂ ಒಂದಲ್ಲ ಒಂದು ಪುಟದಲ್ಲಿ ಲೋಕ ಕಲ್ಯಾಣಕರ ಸಂಗತಿಗಳಾದ ಸತ್ಯ, ದಯೆ ಮತ್ತು ಕರುಣೆಯನ್ನೇ ಹೇಳುತ್ತವೆ. ನಿಜ, ಆದರೆ ಸತ್ಯದ ಕಾಠಿಣ್ಯತೆಯನ್ನು ಅದರ ನಿಜ ಸಾಕ್ಷಾತ್ಕಾರದ ಮಾರ್ಗವನ್ನು ಅಷ್ಟು ಸುಂದರ ಷಟ್ಪದಿಗಳಲ್ಲಿ ಹದಿಮೂರನೆಯ ಶತಮಾನದಲ್ಲೇ ಪ್ರತಿಪಾದಿಸಿದ್ದಲ್ಲದೇ, ಅಂಥದೇ ಪರಿಶುದ್ಧ ಜೀವನವನ್ನೂ ನಡೆಸಿ ಆಗಿಹೋದ ಕವಿ ರಾಘವಾಂಕ ಸಾಮಾಜಿಕ ಮಹೋದ್ದೇಶ ಹೊಂದಿದ್ದನು ಕೂಡ! ಯಾಕೆಂದರೆ, ಆತ ತನ್ನ ಕಾವ್ಯ ಓದಿ ಜನ ಬದುಕಬೇಕು ಎಂದಿದ್ದಾನೆ. ಈ ನಡುವೆ ಇಂಥದೊಂದು ಸತ್ಯ ಸಾಕ್ಷಾತ್ಕಾರದ ಕಥನವನ್ನು ಬರೆದು ತನ್ನ ಗುರುವಿನ ಕೈಯಲ್ಲಿ ಕಪಾಳಕ್ಕೆ ಏಟು ತಿಂದು ಹಲ್ಲು ಉದುರಿಸಿಕೊಳ್ಳುವ ಶಿಕ್ಷೆಗೆ ಗುರಿಯಾದನಲ್ಲ ಎನಿಸಿತು. ಯಾವುದೋ ಘನಸೃಷ್ಟಿಯಲ್ಲಿ ಎಂಥದೋ ಅಚಾತುರ್ಯ ಜರುಗಿಯೇ ಹೋಗುತ್ತದೆ.